# PART – III
## CHILD DEVELOPMENT AND PEDAGOGY

**61.** ಮಗುವಿನ ವಿಕಾಸಕ್ಕೆ ಕಾರಣ

(1) ವಯಸ್ಸು ಮತ್ತು ಅನುಭವ
(2) ವಯಸ್ಸು ಮತ್ತು ಪಕ್ವತೆ
(3) ಪಕ್ವತೆ ಮತ್ತು ಕಲಿಕೆಯ ಅನುಭವ
(4) ಪಕ್ವತೆ ಮತ್ತು ಮೈಕಟ್ಟು

**62.** ಶಿರಾಪಾದ ವಿಕಾಸದ ತತ್ವ ಎಂದರೆ

(1) ವಿಕಾಸವು ಕೇಂದ್ರಭಾಗದಿಂದ ಹೊರಗಿನ ಕಡೆ ಸಾಗುತ್ತದೆ
(2) ವಿಕಾಸವು ತಲೆಯ ಕಡೆಯಿಂದ ಕಾಲಿನ ಬೆರಳುಗಳ ಕಡೆ ಸಾಗುತ್ತದೆ
(3) ವಿಕಾಸವು ಎಲ್ಲಾ ದಿಕ್ಕಿನಲ್ಲಿ ಸಾಗುತ್ತದೆ
(4) ವಿಕಾಸವು ದೇಹದ ಎಲ್ಲಾ ಭಾಗದಲ್ಲಿ ಹರಡುತ್ತದೆ

**63.** ಮಕ್ಕಳು ತಮ್ಮ ಪರಿಸರದಲ್ಲಿರುವ ವಸ್ತುಗಳನ್ನು ಅರ್ಥೈಸಿಕೊಳ್ಳಲು ಉಪಯೋಗಿಸುವ ಜ್ಞಾನಾತ್ಮಕ ರಚನೆಗಳು

(1) ಸ್ವಾಂಗೀಕರಣ
(2) ಹೊಂದಾಣಿಕೆ
(3) ಸ್ಕೀಮ್ಸ್
(4) ಸಮತೋಲನ

**64.** ವ್ಯಕ್ತಿಯ ಬುದ್ಧಿಶಕ್ತಿಯು ಕೆಳಗಿನ ಅಂಶದ ಪರಿಣಾಮವಾಗಿದೆ

(1) ಅನುವಂಶೀಯತೆ
(2) ಪರಿಸರ
(3) ಅನುವಂಶೀಯತೆ ಮತ್ತು ಪರಿಸರ ಎರಡೂ
(4) ಪೌಷ್ಟಿಕತೆ

**65.** ಒಂದು ಮಗು ತನ್ನ ಸಮವಯಸ್ಕರಿಗಿಂತ ಉಚ್ಚಾರಣೆ ಮತ್ತು ಪದ ಸಂಪತ್ತಿನಲ್ಲಿ ಹಿಂದುಳಿದಿದೆ. ಇದರ ಕಾರಣ

(1) ವಿಕಾಸದಲ್ಲಿ ಕೊರತೆ
(2) ಪಕ್ವತೆಯ ಕೊರತೆ
(3) ಸೂಕ್ತ ಬೆಳವಣಿಗೆ ಇಲ್ಲದೆ ಇರುವುದು
(4) ಪೌಷ್ಟಿಕತೆಯ ಕೊರತೆ

**66.** ಭೌತಿಕ ವಿಕಾಸದ ಪ್ರಕ್ರಿಯೆಯಲ್ಲಿ ಮೊದಲು ಮಗುವಿನ ನಿಯಂತ್ರಣಕ್ಕೆ ಒಳಪಡುವುದು

(1) ಶಿರ
(2) ತೋಳುಗಳು
(3) ಕಾಲುಗಳು
(4) ಹಸ್ತ

**67.** ಒಂದು ಮಗುವಿನ ವಯಸ್ಸು 8 ವರ್ಷ ಹಾಗೂ ಅವನ ಮಾನಸಿಕ ವಯಸ್ಸು 10, ಹಾಗಾದರೆ ಅವನ ಬುದ್ಧಿಶಕ್ತಿ ಸೂಚ್ಯಾಂಕವು

(1) 150
(2) 100
(3) 120
(4) 125

**68.** ಸಾಮಾಜೀಕರಣ ಪ್ರಕ್ರಿಯೆಯಲ್ಲಿ ಜ್ಞಾನವನ್ನು ಸಹ-ರಚಿಸಲಾಗುವುದು ಎನ್ನುವ ಸಿದ್ಧಾಂತ

(1) ವೈಗೋಟ್ಸ್ಕಿರವರ ಸಿದ್ಧಾಂತ
(2) ಪಿಯಾಜೆಯವರ ಸಿದ್ಧಾಂತ
(3) ಕೋಲ್‌ಬರ್ಗ್‌ರ ಸಿದ್ಧಾಂತ
(4) ಬ್ರೂನರ್‌ರವರ ಸಿದ್ಧಾಂತ



Use E-Papers, Save Trees
above line hide when print out-www.inyatrust.com

69. ಪಿಯಾಜೆಯವರ ಪ್ರಕಾರ ಜ್ಞಾನವಲಯದ ವಿಕಾಸ ಗರಿಷ್ಠ ಮಟ್ಟದಲ್ಲಿ ಆಗುವ ಹಂತ
(1) ಬಾಲ್ಯಾವಸ್ಥೆ
(2) ಕಿಶೋರಾವಸ್ಥೆ
(3) ಪ್ರೌಢಾವಸ್ಥೆ
(4) ವೃದ್ಧಾಪ್ಯ

70. "ವಸ್ತುಗಳ ಶಾಶ್ವತತೆ" ಸನ್ನಿವೇಶವನ್ನು ಈ ಕೆಳಕಂಡ ಪಿಯಾಜೆಯವರ ಜ್ಞಾನಾತ್ಮಕ ಬೆಳವಣಿಗೆಯಲ್ಲಿ ಕಾಣಬಹುದು
(1) ಪೂರ್ವಕಾರ್ಯ ಹಂತ
(2) ಸಂವೇದನಾಗತಿಯ ಹಂತ
(3) ಔಪಚಾರಿಕ ಕಾರ್ಯಗಳ ಹಂತ
(4) ಮೂರ್ತಕಾರ್ಯಗಳ ಹಂತ

71. ಹಸುಳೆತನ ಹಂತದ ಅವಧಿ
(1) ಜನನದಿಂದ 3 ವರ್ಷಗಳವರೆಗೆ
(2) 3 ವರ್ಷಗಳಿಂದ 6 ವರ್ಷಗಳವರೆಗೆ
(3) 6 ವರ್ಷಗಳಿಂದ 8 ವರ್ಷಗಳವರೆಗೆ
(4) ಗರ್ಭಾವಸ್ಥೆಯಿಂದ ಜನನದವರೆಗೆ

72. ಪರೀಕ್ಷೆಯಲ್ಲಿ ಗಳಿಸಿರುವ ಅಂಕಗಳು ಸೂಚಿಸುವ ಅಂಶ
(1) ಸ್ಮೃತಿ
(2) ಸಾಧನೆ
(3) ಬುದ್ಧಿಶಕ್ತಿ
(4) ಸೃಜನಶೀಲತೆ

73. ವಿದ್ಯಾರ್ಥಿಗಳ ಕಲಿಕೆಯ ಕಠಿಣತೆಯನ್ನು ಕಂಡುಹಿಡಿಯುವ ಪರೀಕ್ಷೆ
(1) ಸಾಧನಾ ಪರೀಕ್ಷೆ
(2) ನೈದಾನಿಕ ಪರೀಕ್ಷೆ
(3) ವೈದ್ಯಕೀಯ ಪರೀಕ್ಷೆ
(4) ಪ್ರವೇಶ ಪರೀಕ್ಷೆ

74. ಈ ಕೆಳಗಿನವುಗಳಲ್ಲಿ ಒಂದು ಪೂರ್ವ ವಾಕ್ ಶಕ್ತಿಯ ಸಂವಹನವಲ್ಲ
(1) ಅಳುವುದು
(2) ತೊದಲುವುದು
(3) ಹಾವಭಾವ
(4) ವಾಕ್ಯಗಳು

75. ವಿದ್ಯಾರ್ಥಿಯ ಶೈಕ್ಷಣಿಕ ಸಾಧನೆಯನ್ನು ಅಳೆಯಬಹುದಾದ ಪರೀಕ್ಷೆ
(1) ಸಾಧನಾ ಪರೀಕ್ಷೆ
(2) ವ್ಯಕ್ತಿತ್ವ ಪರೀಕ್ಷೆ
(3) ಬುದ್ಧಿಶಕ್ತಿ ಪರೀಕ್ಷೆ
(4) ಅಭಿಕ್ಷಮತೆ ಪರೀಕ್ಷೆ

76. ವಿಶ್ವ ಆರೋಗ್ಯ ಸಂಘಟನೆ (1980) ರವರ ಪ್ರಕಾರ 'ಅಶಕ್ತ' ಎಂದರೆ
(1) ಕೆಳಮಟ್ಟದ ಸಾಧನೆ
(2) ಒಬ್ಬ ವ್ಯಕ್ತಿ ಅನುಭವಿಸುವ ಅನಾನುಕೂಲತೆಗಳು
(3) ದೇಹದ ರಚನೆ ಮತ್ತು ಕಾರ್ಯಗಳಲ್ಲಿ ಅಸಾಧಾರಣತೆ
(4) ದೃಷ್ಟಿ ದೋಷ



Use E-Papers, Save Trees
above line hide when print out-www.inyatrust.com

**77.** ಮಂದಗಾಮಿಯಾಗಿ ಕಲಿಯುವವರ ಬುದ್ಧಿಶಕ್ತಿ ಸೂಚ್ಯಾಂಕವು

(1) 70 – 90 (2) 90 – 110 (3) 110 – 120 (4) 50 ಕ್ಕೆ ಮೇಲ್ಪಟ್ಟು

**78.** ಡಿಸ್‌ಲೆಕ್ಸಿಯಾ ಎಂದರೆ

(1) ಮಾನಸಿಕ ಅಸ್ವಸ್ಥತೆ (2) ವರ್ತನಾ ಅಸ್ವಸ್ಥತೆ

(3) ವಾಚನಾ ಅಸ್ವಸ್ಥತೆ (4) ಬರವಣಿಗಾ ಅಸ್ವಸ್ಥತೆ

**79.** ಸೃಜನಶೀಲತೆಯ ಕೊನೆಯ ಹಂತ

(1) ಪ್ರೇರಣೆ/ಸ್ಫೂರ್ತಿ (2) ತಾಳೆನೋಡುವುದು

(3) ವೀಕ್ಷಣೆ (4) ಪರಿಶೀಲನೆ

**80.** ಮಕ್ಕಳು ಸಾಮಾನ್ಯ ವರ್ತನೆಗಳಿಂದ ಭಿನ್ನವಾಗಿ, ಸಾಮಾಜಿಕ ಅನಪೇಕ್ಷಿತ ರೀತಿಯಲ್ಲಿ ವರ್ತಿಸಿದಾಗ ಅವರು

(1) ಅಪರಾಧಿಗಳು (2) ನರವ್ಯಾದಿಗ್ರಸ್ತ

(3) ಸಾಮಾಜಿಕವಾಗಿ ಹಿಂದುಳಿದವರು (4) ಶೈಕ್ಷಣಿಕವಾಗಿ ಹಿಂದುಳಿದವರು

**81.** ಒಂದು ಮಗು 15 ಸೇಬು ಹಣ್ಣಿನ ಬುಟ್ಟಿಯಿಂದ, 8 ಸೇಬು ಹಣ್ಣುಗಳನ್ನು ತೆಗೆದ ನಂತರ, 7 ಹಣ್ಣುಗಳು ಉಳಿದಿವೆ ಎಂದು ಅರ್ಥೈಸಿಕೊಳ್ಳುವುದು. ಇದು ಇದರ ಉದಾಹರಣೆ

(1) ಪಾರ್ಶ್ವ ವರ್ಗಾವಣೆ (2) ಅನುಕ್ರಮ ವರ್ಗಾವಣೆ

(3) ಸಮತಲ ವರ್ಗಾವಣೆ (4) ಲಂಬ ವರ್ಗಾವಣೆ

**82.** ಈ ಕೆಳಗಿನವುಗಳಲ್ಲಿ ಜೈವಿಕ ಅಗತ್ಯತೆ ಅಲ್ಲದಿರುವುದು

(1) ಆಹಾರದ ಅಗತ್ಯತೆ (2) ವಿರಾಮದ ಅಗತ್ಯತೆ

(3) ನಿದ್ದೆಯ ಅಗತ್ಯತೆ (4) ಬದ್ರತೆಯ ಅಗತ್ಯತೆ

**83.** ಕ್ರಿಯಾಜನ್ಯ ವರ್ತನೆಯನ್ನು ಧನಾತ್ಮಕ ಪ್ರಚೋಧನೆಯ ಮೂಲಕ ದೃಢಗೊಳಿಸಬಹುದು, ಆದರೆ ಋಣಾತ್ಮಕ ಪುನರ್ ಬಲನವು ಅದನ್ನು ದುರ್ಬಲಗೊಳಿಸುತ್ತದೆ. ಇದನ್ನು ಹೇಳಿದವರು

(1) ಪಾವ್‌ಲೋವ್ (2) ಬಂಡುರಾ

(3) ಸ್ಕಿನ್ನರ್ (4) ಥೋರ್‌ನ್‌ಡೈಕ್

**84.** ಈ ಕೆಳಗಿನವುಗಳಲ್ಲಿ ಒಂದು ತರಗತಿಯ ಪ್ರೇರಣಾ ತಂತ್ರವಲ್ಲದಿರುವುದು

(1) ಶಿಕ್ಷಕ ಕೇಂದ್ರಿತ ಮಾರ್ಗ

(2) ಮಗು ಕೇಂದ್ರಿತ ಮಾರ್ಗ

(3) ಸ್ಪರ್ಧೆ ಮತ್ತು ಸಹಕಾರ

(4) ಬಹುಮಾನ ಮತ್ತು ಶಿಕ್ಷೆ



Use E-Papers, Save Trees
above line hide when print out-www.inyatrust.com

**85.** ಅನುವಂಶೀಯತೆಯ ಪ್ರಕಾರ, ಒಂದು ಮಗು ಅನುವಂಶಿಕವಾಗಿ

(1) ತಂದೆ-ತಾಯಿಯರಿಂದ ಎಲ್ಲಾ ಪ್ರಬಲ ಗುಣ-ಲಕ್ಷಣಗಳನ್ನು ಪಡೆದುಕೊಳ್ಳುತ್ತದೆ

(2) 50% ಪಿತೃವಿನ ಮತ್ತು 50% ಮಾತೃವಿನ ಕಡೆಯಿಂದ

(3) 75% ತಾಯಿಯಿಂದ ಮತ್ತು 25% ತಂದೆಯಿಂದ

(4) ತಂದೆ-ತಾಯಿಯರ ಎಲ್ಲಾ ದುರ್ಬಲ ಗುಣ-ಲಕ್ಷಣಗಳು

**86.** ಅನಾರೋಗ್ಯಕರ ಮನೋಧೋರಣೆ, ಮೂಢನಂಬಿಕೆ ಮತ್ತು ಭಯ ಇವುಗಳನ್ನು ತೊಡೆದುಹಾಕಲು ಬಳಸಬಹುದಾದ ಸಿದ್ಧಾಂತ

(1) ಪ್ರಯತ್ನ ಮತ್ತು ದೋಷ ಕಲಿಕೆ

(2) ಒಳನೋಟ ಕಲಿಕೆ

(3) ಕ್ರಿಯಾಜನ್ಯ ಅನುಬಂಧನ

(4) ಸಾಂಪ್ರದಾಯಿಕ ಅನುಬಂಧನ

**87.** ಈ ಕೆಳಗಿನವುಗಳಲ್ಲಿ ಕ್ರಿಯಾಜನ್ಯ ಅನುಬಂಧನಕ್ಕೆ ಸೇರದೆ ಇರುವುದು

(1) ರೂಪಿಸುವಿಕೆ

(2) ಅಳಿಸಿ ಹೋಗುವಿಕೆ

(3) ಸ್ವಾಭಾವಿಕವಾಗಿ ಪುನಃ ಪಡೆದುಕೊಳ್ಳುವುದು

(4) ಪ್ರಚೋದನೆ ಇಲ್ಲ – ಪ್ರತಿಕ್ರಿಯೆ ಇಲ್ಲ

**88.** ಒಳನೋಟ ಕಲಿಕೆಯಲ್ಲಿ ಬಳಸದೇ ಇರುವ ಮಾರ್ಗ

(1) ಪ್ರಯತ್ನ-ದೋಷ ಕಲಿಕೆ

(2) ಸಮಸ್ಯೆ ಪರಿಹಾರ

(3) ಇಡೀಯಿಂದ ಬಿಡಿಯ ಕಡೆಗೆ

(4) ಸಮಗ್ರವಾಗಿಸುವುದು

**89.** ಕಲಿಕೆಯ ಪ್ರಕ್ರಿಯೆಯಲ್ಲಿ, ಪ್ರತಿಕ್ರಿಯೆಯು ಹೆಚ್ಚು ಸಂಭವನೀಯವಾಗಿ ಪುನರ್‌ಬಲನದ ಮೂಲಕ ಆಗುವುದು

(1) ಸಾಂಪ್ರದಾಯಿಕ ಅನುಬಂಧನದಲ್ಲಿ

(2) ಕ್ರಿಯಾಜನ್ಯ ಅನುಬಂಧನದಲ್ಲಿ

(3) ಪ್ರಯತ್ನ ಮತ್ತು ದೋಷ ಕಲಿಕೆಯಲ್ಲಿ

(4) ಒಳನೋಟ ಕಲಿಕೆಯಲ್ಲಿ

**90.** ಮಕ್ಕಳು ತಂದೆ-ತಾಯಿಯರನ್ನು ಹೋಲುತ್ತಾರೆ. ಇದು ಇದರ ಉದಾಹರಣೆ

(1) ಸಾಮ್ಯತೆಯ ನಿಯಮ

(2) ಭಿನ್ನತೆಯ ನಿಯಮ

(3) ದುರ್ಬಲ ನಿಯಮ

(4) ಪ್ರಬಲ ನಿಯಮ



Use E-Papers, Save Trees
above line hide when print out-www.inyatrust.com